1. ತಿಪ್ಪಗೊಂಡನಹಳ್ಳಿ ಜಲಾಶಯದ ದಂಡೆಯ ಮೇಲೆ ಡಿ.ಎಲ್.ಎಫ್, ಸಂಸ್ಥೆಗೆ ವಸತಿ ಸಮುಚ್ಚಯ ಕಟ್ಟಲು ಯಾವಾಗ ಅನುಮತಿ ನೀಡಲಾಯಿತು.

2. ಈ ವಸತಿ ಸಮುಚ್ಚಯ ನಿರ್ಮಾಣ ಕುರಿತು ಬೆಂಗಳೂರು ಜಲಮಂಡಳಿ, ಪರಿಸರವಾದಿಗಳು ನಾಡಿನ ಹಿರಿಯ ಚಿಂತಕರು ವ್ಯಕ್ತಪಡಿಸಿರುವ ಅಡ್ಡಿ ಆತಂಕ ಸರ್ಕಾರದ ಗಮನಕ್ಕೆ ಬಂದಿದೆಯೇ?

3. ಹಾಗಿದ್ದಲ್ಲಿ, ತಿಪ್ಪಗೊಂಡನಹಳ್ಳಿ ಕೆರೆ ಯಾವುದೇ ರೀತಿಯಿಂದ ಕಲುಶಿತವಾಗದಿರಲು ಸರ್ಕಾರ ಹಿಂದೆ ನೀಡಿದ್ದ ಆದೇಶವನ್ನು ಹಿಂದಕ್ಕೆ ಪಡೆಯಲು ತೆಗೆದುಕೊಂಡ ಕ್ರಮಗಳು.

ಶ್ರೀ ವಿ. ಸೋಮಣ್ಣ (ಬೆಂಗಳೂರು ಅಭಿವೃದ್ಧಿ ರಾಜ್ಯ ಸಚಿವರು) :—

1. ಸರ್ಕಾರ ದಿನಾಂಕ : 26.9.91ರ ಆದೇಶದಲ್ಲಿ ಅನುಮತಿಯನ್ನು ನೀಡಲಾಯಿತು.

2. ಹೌದು

3. ಸರ್ಕಾರದ ಪರಿಶೀಲನೆಯಲ್ಲಿದೆ.

ಪೋಲೀಸ್ ಇಲಾಖೆಯ ವನಿತ ಸಹಾಯವಾಣಿ.

993(1404) ಶ್ರೀ ವಿ. ಶಿವರಾಜ್ (ಯಲಹಂಕ) :— ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಪೋಲೀಸ್ ಇಲಾಖೆಯು ವನಿತಾ ಸಹಾಯವಾಣಿಯನ್ನು ಪ್ರಾರಂಭಿಸಿದ ದಿನಾಂಕ ಯಾವುದು; ಸದರಿ ವಿಬಾಗಕ್ಕೆ ಯಾವ ಯಾವ ಸೌಲಭ್ಯ ನೀಡಲಾಗಿದೆ;

ಆ) ಸದರಿ ವಿಭಾಗಕ್ಕೆ ದಾಖಲಾದ ಪ್ರಕರಣಗಳ ಸಂಖ್ಯೆ ಎಷ್ಟು ಹಾಗೂ ಇತ್ಯರ್ಥವಾದ ಪ್ರ ಕರಣಗಳ ಸಂಖ್ಯೆ ಎಷ್ಟು;

ಇ) 1999ರ ಫೆಬ್ರುವರಿ ಕೊನೆ ವಾರದಲ್ಲಿ ದಾಖಾದ ಪ್ರಕರಣಗಳ ಸಂಖ್ಯೆ ಎಷ್ಟು; ಅವುಗಳ ವಿಲೇವಾರಿಗೆ ತೆಗೆದುಕೊಂಡ ಕ್ರಮಗಳಾವುವು; (ವಿವರ ನೀಡುವುದು)

ಈ) ಇತ್ಯರ್ಥಗೊಂಡ ಪ್ರಕರಣಗಳಲ್ಲಿ ಕೊಂದರೆ ಮರುಕಳಿಸಿದಲ್ಲಿ ಯಾವ ರೀತಿಯಲ್ಲಿ ಪರಿಹಾರ ಸರ್ಕಾರ ದೊರಕಿಸಿಕೊಡುವುದು.

ಉ) ಯಾವ ಯಾವ ರೀತಿಯ ದೂರುಗಳನ್ನು ಈ ವಿಭಾಗದಲ್ಲಿ ದಾಖಲಿಸಿಕೊಳ್ಳಲಾಗುವುದು;

ಊ) ಸರಕಾರಿ ಕಛೇರಿಗಳಲ್ಲಿ ಮಹಿಳೆಯರಿಗೆ ಆಡಳಿತಾತ್ಮಕ ವಿಷಯದಲ್ಲಿ ನೀಡಬಹುದಾದ ಕಿರುಕುಳ ಮಾನಸಿಕ ಹಿಂಸೆ ಇದರ ವ್ಯಾಪ್ತಿಯಲ್ಲಿ ಬರುವುದೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :—

ಅ) ದಿನಾಂಕ : 23-1-99ರಂದು ಬೆಂಗಳೂರು ನಗರ ಪೊಲೀಸ್ ಕಮಿಷನರ್‌ರವರ ಕಛೇರಿಯ ಆವರಣದಲ್ಲಿ ವನಿತಾ ಸಹಾಯವಾಣಿ ಪ್ರಾರಂಭಿಸಲಾಗಿದೆ. ವನಿತಾ ಸಹಾಯವಾಣಿಯನ್ನು 80 ಸಹಕಾರೇತರ ಸಂಸ್ಥೆಗಳ ಸಹಯೋಗದೊಂದಿಗೆ ಪ್ರಾರಂಭಿಸಲಾಗಿದೆ. ಪೊಲೀಸ್ ಇಲಾಖೆಯು ಸಹಯೋಗ ಮಾತ್ರ ಒದಗಿಸಿದ್ದು ಬೇರೆ ಯಾವ ರೀತಿಯ ವ್ಯವಸ್ಥೆ ಮಾಡಿರುವುದಿಲ್ಲ.

ಅ) ಮಾಹಿತಿ ಕರೆಗಳು	-	2662
ಆ) ನಿರ್ದಿಷ್ಟ ಸಮಸ್ಯೆಗಳ ಕರೆಗಳು-		272
	-	2934

272 ಪ್ರಕರಣವನ್ನು ಇತ್ಯರ್ಥಗೊಳಿಸಲಾಗಿದೆ.

ಇ) ದಿನಾಂಕ: 22-2-99 ರಿಂದ 28-2-99ರವರೆಗೆ ಒಟ್ಟು 32 ಪ್ರಕರಣ ದಾಖಲಾಗಿದ್ದು, ಈ ಎಲ್ಲಾ ಪ್ರಕರಣಗಳು ವಿಲೇವಾರಿಯಾಗಿದೆ.

ಈ) ಇತ್ಯರ್ಥಗೊಂಡ ಪ್ರಕರಣಗಳಲ್ಲಿ ತೊಂದರೆ ಮರುಕಳಿಸಿದಲ್ಲಿ ವನಿತಾ ಸಹಾಯವಾಣಿ ಪುನರ್ ಸಲಹೆ ನೀಡುವುದು ಹಾಗೂ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆ ನಡೆಸಿ ಕಾನೂನು ಕ್ರಮ ಕೈಗೊಳ್ಳುವುದು.

ಬೆಂಗಳೂರು ನಗರ ಪೊಲೀಸರು ಮಹಿಳೆಯರ ಮೇಲಿನ ದೌರ್ಜನ್ಯಗಳಿಗೆ ಸಂಬಂಧಿಸಿದಂತೆ ಸೂಕ್ತ ರೀತಿಯಲ್ಲಿ ಸ್ಪಂದಿಸಲು ಮತ್ತು ಈ ಪ್ರಕರಣಗಳನ್ನು ನಿರ್ವಹಿಸುವಲ್ಲಿ ಸಾರ್ವಜನಿಕರ ಸಹಯೋಗವನ್ನು ಪಡೆದುಕೊಳ್ಳಿಸುವುದಕ್ಕಾಗಿ ಈ ಸಹಾಯ ವಾಣಿಯನ್ನು ಪ್ರಾರಂಭಿಸಿದ್ದಾರೆ. ತೊಂದರೆಗೆ ಒಳಗಾದ ಮಹಿಳೆಯರಿಗೆ ಸಾರ್ವಜನಿಕ ಸೇವಾ ಸಂಸ್ಥೆಗಳು ಮತ್ತು ಸ್ವಯಂ ಸೇವಕರ ನೆರವಿನಿಂದ ಈ ಕೆಳಕಂಡ ನೆರವು ನೀಡಲಾಗುತ್ತದೆ.

1) ಕೌಟುಂಬಿಕ ಸಮಸ್ಯೆಗೆ ಸೂಕ್ತ ಪರಿಹಾರವನ್ನು ಸೂಚಿಸುವುದು.

2) ಸಂಕಷ್ಟದಲ್ಲಿರುವ ಮಹಿಳೆಯರಿಗೆ ತಕ್ಷಣ ಹೊಂದಿದ ಸ್ವಯಂ ಸೇವಕರ : ಪೊಲೀಸ್ ಸಹಾಯವನ್ನು ದೊರಕಿಸಿಕೊಡುವುದು.

3) ಕೌಟುಂಬಿಕ ಕಲಹದಿಂದಾಗಿ ದಿಕ್ಕು ತಪ್ಪಿದ ಮಹಿಳೆಯರಿಗೆ ತಾತ್ಕಾಲಿಕ ನೆಲೆಯನ್ನು ಒದಗಿಸುವುದು.

ಸರ್ಕಾರಿ ಕಛೇರಿಗಳಲ್ಲಿ ಕೆಲಸ ಮಾಡುವ ಮಹಿಳೆಯರಿಗೂ ಸೂಕ್ತ ಸಹಾಯವನ್ನು ನೀಡುವುದು ಸಹ ಈ ಸಹಾಯವಾಣಿಯ ಉದ್ದೇಶವಾಗಿದೆ. ಈ ಮಹಿಳೆಯರೂ ಯಾವುದೇ ರೀತಿಯ ಶೋಷಣೆ, ಹಿಂಸೆಯ ಬಗ್ಗೆ ದೂರನ್ನು ನೀಡಬಹುದು. ಅಂತಹ ದೂರುಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಸಂಸದರಿಗೆ ಸೌಲಭ್ಯ.

995(1301) ಶ್ರೀ ಶಿವಾನಂದ ನಾಯಕ (ಬಿಟ್ಟಳ್ಳಿ) :— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರ್ನಾಟಕ ರಾಜ್ಯದ ಸಂಸತ್ ಸದಸ್ಯರುಗಳಿಗೆ ರಾಜ್ಯ ಸರ್ಕಾರವು ಒದಗಿಸಿರುವ ಸೌಲಭ್ಯಗಳು ಯಾವುವು?

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :—

ಅ) ದಿನಾಂಕ 26-06-1993ರ ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 153 ಶಿವಾನೀ 93 ರಲ್ಲಿ ಸಂಸತ್ ಸದಸ್ಯರುಗಳಿಗೆ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗಿದೆ.

1) ಸಂಸತ್ ಸದಸ್ಯರುಗಳು ಸಂದರ್ಶನ ಮತ್ತು ಕಾರ್ಯಕಲಾಪಗಳನ್ನು ನಿರ್ವಹಿಸಲು ಒಂದು ಕೊಠಡಿ;

2) ಒಬ್ಬ ಶೀಘ್ರಲಿಪಿಗಾರರು;

3) ವಾಹನ ಹಾಗೂ ವಾಹನ ಚಾಲಕರು.

ವಿದ್ಯುತ್ ಸಂಪರ್ಕ ಸಕ್ರಮ.

996(783) ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು) :— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಅಕ್ರಮ ವಿದ್ಯುತ್ ಸಂಪರ್ಕಗಳನ್ನು ಯಾವ ದಿನಾಂಕದವರೆಗೆ ಸಕ್ರಮಗೊಳಿಸಲಾಗುವುದು, ಇದರಿಂದ ಸರ್ಕಾರಕ್ಕೆ ಆದ ನಷ್ಟ ಅಥವಾ ಲಾಭವೆಷ್ಟು?

ಆ) ಈ ರೀತಿ ಅಕ್ರಮ ಸಂಪರ್ಕಗಳನ್ನು ಸಕ್ರಮಗೊಳಿಸುವುದರಿಂದ ವಿದ್ಯುತ್ ಸಂಪರ್ಕ ವ್ಯವಸ್ಥೆಗಳಲ್ಲಿ ಆಗುವ ತೊಂದರೆಗಳ ಬಗ್ಗೆ ಸರ್ಕಾರ ಮಹಿಸಿರುವ ಪರ್ಯಾಯ ವ್ಯವಸ್ಥೆಗಳೇನು?